ಶ್ರೀ ಡಿ. ದೇವರಾಜ ಅರಸ್.—ಎಲ್ಲ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ಮುಂದಿನ ತಿಂಗಳು ಟೆಕ್ಸ್‌ಟೈಲ್ಸ್ ಕಮೀಷನರ್ ಅವರು ಬಂದಾಗ ಅವರ ಹತ್ತಿರ ಕೂಡ ಮಾತನಾಡುತ್ತೇವೆ. ಈಗ ಏಕಾಕಿ ಬದಲಾವಣೆ ಮಾಡುವುದು ಕಷ್ಟವಾಗುತ್ತದೆ. ಮಿಲ್‌ನವರು ಬಟ್ಟೆಗಳನ್ನು ತಯಾರು ಮಾಡುವುದು ಬೇಡ ಎಂದು ಹೇಳಬಿಟ್ಟರೆ ಹೊರದೇಶಗಳಿಗೆ ಕಳಿಸುವ ಬಟ್ಟೆಗಳಿಂದ ನಮಗೆ ಬರುವ ಫಾರಿನ್ ಎಕ್ಸ್‌ಚೇಂಜ್ ತಪ್ಪಿಹೋಗುತ್ತದೆ. ಮತ್ತು ಇತರೇ ಬೇರೆ ಬೇರೆ ಪರಿಣಾಮಗಳು ಉಂಟಾಗುತ್ತವೆ. ಆದ್ದರಿಂದ ಏನು ಬದಲಾವಣೆ ಮಾಡಬೇಕಾದರೂ ಕಾಲ ಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಕೈಮಗ್ಗದವರ ಕೇವಲ ರೇಷ್ಮೆ ಬಟ್ಟೆಗಳನ್ನೇ ನೇಯುವಂತೆ ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಎಲ್ಲರೂ ರೇಷ್ಮೆ ಬಟ್ಟೆಗಳನ್ನೇ ಉಟ್ಟುಕೊಂಡರೆ ಹತ್ತಿ ಬಟ್ಟೆಗಳನ್ನು ಉಟ್ಟುಕೊಳ್ಳುವವರು ಯಾರು ?

ಶ್ರೀ ಡಿ. ದೇವರಾಜ ಅರಸ್.—ವಿಷಯಗಳನ್ನು ಪೂರ್ತಾ ತಿಳಿದುಕೊಂಡು ಯಾವುದನ್ನು ಬದಲಾವಣೆ ಮಾಡಬೇಕಾಗುತ್ತದೆಂದು ನಾನು ಮೊದಲೇ ಹೇಳಿದೆ.

[MR. DEPUTY SPEAKER in the Chair]

Government Grants (Mysore Extension) Bill, 1972.

Motion to Consider (Debate continued)

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಮುಂದೆ ಮಾನ್ಯ ಸಚಿವರು ತಂದಿರತಕ್ಕ ಬಿಲ್ ಬಹಳ ಸ್ವಾಗತಾರ್ಹವಾದುದು. ಸರ್ಕಾರದವರು ಭೂ ಹೀನರಿಗೆ ಉಚಿತವಾಗಿ ಕೊಡುವ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಬಾರದೆಂಬ ಉದ್ದೇಶದಿಂದ ಇದನ್ನು ತಂದಿದ್ದಾರೆ. ಇದರ ಬಗ್ಗೆ ಹೇಳುವುದಕ್ಕೆ ಮೊದಲು ಒಂದು ಮಾತನ್ನು ಹೇಳುತ್ತೇನೆ. ನಮ್ಮ ಎದುರು ಪಕ್ಷದಲ್ಲಿ ಅನೇಕ ಹಿರಿಯ ಮಿತ್ರರು ಇದ್ದಾರೆ. ಅವರಲ್ಲಿ ನಮಗೆ ಸ್ವಾತಂತ್ರ್ಯ ಬಂದಮೇಲೆ ಸರ್ಕಾರ ನಡೆಸಿದಂತಹವರು ಕೆಲವು ಇದ್ದಾರೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಎಷ್ಟು ಲಕ್ಷ ಜನರಿಗೆ ಜಮೀನು ಹಂಚಿಕೆಯಾಗಿದೆ ಎಂಬುದನ್ನು ತುಲನೆ ಮಾಡಿ ನೋಡಿದಾಗ, ಲಕ್ಷಗಟ್ಟಲೆ ಜನರು ಜಮೀನನ್ನು ಪಡೆದಿದ್ದರೂ ಸಹ ಅವರುಗಳು ಕಷ್ಟ ನಷ್ಟಕ್ಕೆ ಒಳಗಾಗಿ ತಮಗಿದ್ದ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಿಬಿಟ್ಟಿದ್ದಾರೆ. ಇಂತಹ ಒಂದು ಸನ್ನಿವೇಶದಲ್ಲಿ ಈ ಬಿಲ್ಲಿನ ಔಚಿತ್ಯವಾದರೂ ಏನು ಎಂದು ತಮ್ಮ ಮುಖಾಂತರ ತಿಳಿಯಬಯಸುತ್ತೇನೆ. ಈ ಹಿಂದೆ ಸರ್ಕಾರದವರು ಪುಕಸಟ್ಟೆಯಾಗಿ ಕೊಟ್ಟ ಜಮೀನನ್ನು ಪರಭಾರೆ ಮಾಡಿದ್ದರೆ, ಅಂತಹವರ ಬಗ್ಗೆ ಸರ್ಕಾರದವರು ಏನು ಆಲೋಚನೆ ಮಾಡಿದೆ ಎಂಬುದು ಗೊತ್ತಿಲ್ಲ. ಭೂ ಸುಧಾರಣೆಯಿಂದ ಸರ್ಕಾರದ ವಶಕ್ಕೆ 3-4 ಲಕ್ಷ ಎಕರೆ ಜಮೀನು ದೊರೆಯಬಹುದಾದರೂ ಸಹ, ಅದನ್ನು ಭೂಮಿ ಇಲ್ಲದ 80 ಲಕ್ಷ ಜನರಿಗೆ ಯಾವ ರೀತಿ ಹಂಚುತ್ತಾರೆಂಬುದು ಗೊತ್ತಾಗುತ್ತಿಲ್ಲ. ಮತ್ತು ಈ ಬಿಲ್ಲಿನಿಂದ ಯಾವ ರೀತಿ ಉಪಯೋಗವಾಗುತ್ತದೆಂಬುದು ಸಹ ಅರ್ಥವಾಗುತ್ತಿಲ್ಲ. ಇದನ್ನೆಲ್ಲಾ ನೋಡಿದಾಗ ಈ ಮಂತ್ರಿಮಂಡಲದವರು ಅನ್ನದ ಜನಪ್ರಿಯತೆಯನ್ನು ಗಳಿಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದಾರೆ ಶಿವಾಯ, ಇದರಿಂದ ಬಡ ಜನತೆಗೆ ಯಾವ ಅನುಕೂಲವೂ ಆಗುವುದಿಲ್ಲ. ಇವರಲ್ಲಿ ಏನಾದರೂ ಮಾನವೀಯತೆ ಇದ್ದರೆ, ಬಡವರ ಬಗ್ಗೆ ಅನುಕಂಪ ಇದ್ದರೆ, ಹಿಂದೆ ಯಾರು ಯಾರು ಉದ್ದೇಶಪೂರ್ವಕವಾಗಿ ಸರ್ಕಾರದಿಂದ ಜಮೀನು ಪಡೆದು ದುರುದ್ದೇಶದಿಂದ ಬೇರೆಯವರಿಗೆ ಮಾರಾಟ ಮಾಡಿದ್ದರೆ, ಅಂತಹವರಿಗೆ ಶಿಕ್ಷೆ ವಿಧಿಸುತ್ತೇವೆಂದು ಹೇಳಿದ್ದರೆ ಇವರಿಗೆ ಶಹಭಾಷ್‌ಗಿರಿಯನ್ನು ಕೊಡಬಹುದಾಗಿತ್ತು. ಈ ಬಿಲ್ ಬಗ್ಗೆ ಮಾತನಾಡಿದ ಅನೇಕ ಸದಸ್ಯರುಗಳು ಈ ಬಿಲ್ಲನ್ನು ಪೂರ್ವಾನ್ವಯವಾಗಿ ಜಾರಿಗೆ ತರಬೇಕೆಂದು ಹೇಳಿದರು. ಈ ವಿಷಯದಲ್ಲಿ ನಾನು ಒಬ್ಬ ರೈತನಾಗಿ ಪ್ರಸ್ತಾಪ ಮಾಡುವುದೇನೆಂದರೆ, ಅನೇಕರು ತಮ್ಮ ಸ್ವಂತ ಶ್ರಮದಿಂದ ಹಣ ಸಂಪಾದನೆ ಮಾಡಿ ಜಮೀನನ್ನು ಕೊಂಡವರು ಇದ್ದಾರೆ. ಮಣ್ಣು ತಿಂದು, ಹೊನ್ನ ಬೆಳೆದ ರೈತರು, ತಮ್ಮ ಸ್ವಂತ ಶ್ರಮದಿಂದ ಹಣವನ್ನು ಗಳಿಸಿ ಜಮೀನು ಕೊಂಡಿದ್ದಾರೆಯೇ ವಿನಃ ಬ್ಲಾಕ್ ಮಾರ್ಕೆಟ್‌ನಲ್ಲಿ ಕಳ್ಳಹಣ ಸಂಪಾದನೆ ಮಾಡಿದ ಜನರು ಮೈಸೂರು ರಾಜ್ಯದಲ್ಲಿ ಇಬ್ಬರಿಗೆ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಜಮೀನನ್ನು ಕೊಂಡಿಲ್ಲ. ಜಮೀನನ್ನೇ ಅವಲಂಬಿಸಿರತಕಂಥ ಜನರು ಇಂದು ಲಕ್ಷಾಂತರಮಂದಿ ಇದ್ದಾರೆ ಅದಕಾರಣ ಈ ಬಿಲ್ಲನ್ನು ಪೂರ್ವಾನ್ವಯವಾಗಿ ಜಾರಿಗೆ ತುಂದರೆ ಅದರಿಂದ ತಂಬಾ ಧಕ್ಕೆ ಯಾಗುತ್ತದೆಂದು ತಮ್ಮ ಮುಖಾಂತರ ನಮ್ಮ ತೆಯಿಂದ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿಯಿಂದ ಜನಪ್ರಿಯತೆಯನ್ನು ಸಂಪಾದನೆ ಮಾಡುವುದಕ್ಕೆ ಸರ್ಕಾರದವರು ಹೋಗಬಾರದು. ಜನಸಾಮಾನ್ಯರಿಗೆ ನಿಜವಾಗಿಯೂ ನ್ಯಾಯ ಮಾಡಬೇಕೆಂದು ನಿಮ್ಮ ಅಂತ ರಾತ್ಮದಲ್ಲಿ ಇದ್ದರೆ ವಿತರಣೆ ಮಾಡುವುದಕ್ಕೆ ಎಷ್ಟು ಎಕರೆ ಜಮೀನು ಇದೆ ಎಂಬುದನ್ನು ಮೊದಲು ಕಂಡುಹಿಡಿದು ಅದನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಿ. ಹೆಚ್ಚುವರಿ ಜಮೀನು ಕಾನೂದದ ಮೇಲೆ ಇಪೆಯೇ ಹೊರತು, ಯಾವ ಗ್ರಾಮಾಂತರ ಪ್ರದೇಶಗಳಲ್ಲಿಯೂ ಹಂಚುವುದಕ್ಕೆ ಜಮೀನು ಇಲ್ಲ. ಸರ್ಕಾರೀ ಜಮೀನೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ವ್ಯವಸಾಯಗಾರರ ವಶದಲ್ಲಿಯೇ ಇದೆ. ಇದಕ್ಕೆ ಕಾರಣ ಚುನಾವಣೆಯಾದ ಮೇಲೆ ತಾವು ಅಧಿಕಾರಕ್ಕೆ ಬಂದಮೇಲೆ ಬಡವರಿಗೆ ಜಮೀನು ಕೊಡುತ್ತೇವೆಂದು ಹೇಳಿದ್ದರಿಂದ, ಜನರು ತಾವೇ ಜಮೀನನ್ನು ವಶಪಡಿಸಿಕೊಂಡುಬಿಟ್ಟರು. ಈ ಕಾರಣದಿಂದ ಬಡವರಿಗೆ ಹಂಚುವುದಕ್ಕೆ ಜಮೀನು ಇಲ್ಲವಾಗಿದೆ. ಮುಖ್ಯವಾಗಿ ಈ ಬಿಲ್ಲನ್ನು ಅಗ್ಗದ ಜನಪ್ರಿಯತೆಯನ್ನು ಗಳಿಸುವುದಕ್ಕೆ ತಂದಿದ್ದಾರೆಯೇ ಹೊರತು, ಇದರಿಂದ ನಮ್ಮ ರಾಜ್ಯದ ಯಾವ ರೈತನಿಗೂ ಉಪಕಾರವಾಗುವುದಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ನಿನ್ನೆ ದಿವಸ ನಾನು ಮಾತ ನಾಡುವಾಗ ಲೋಕಾಭಿರಾವ.ವಾಗಿ ಭಾಷಣ ಮಾಡುತ್ತಾ, ಒಂದು ಗಾದೆಯ ಬಗ್ಗೆ ಹೇಳಿದೆ. ಗಾದೆ ವೇದಕ್ಕೆ ಸಮಾನ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅದು ಅಷ್ಟು ವಾದ ವಿವಾದಗಳಿಗೆ ಒಳಗಾಗುತ್ತದೆ ಎಂದು ನಾನು ತಿಳಿದಿರಲಿಲ್ಲ. ಮಾನ್ಯ ಅಧ್ಯ ರು ಹೇಳಿದಂತೆ ಇದರ ಬಗ್ಗೆ ಇನ್ನು ಹೆಚ್ಚಾಗಿ ಮುಂದುವರಿಸದೆ ಅಧ್ಯಕ್ಷರ ಅಪ್ಪಣೆಯಂತೆ ಈ ಬಿಲ್ಲಿನ ಬಗ್ಗೆ ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಇವೊತ್ತಿನ ದಿವಸ ತಂದಿರತಕ್ಕ ಬಿಲ್ಲನ್ನು ಸ್ವಾಗತ ಮಾಡುತ್ತೇನೆ. ಇದರಲ್ಲಿ ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್ ಆಗಿ ಕೊಡಬೇಕೇ ಬೇಡವೇ ಎನ್ನುವುದರ ಬಗ್ಗೆ ಕೆಲವು ಸದಸ್ಯರು ಇಲ್ಲ ನಲಹೆ ಮಾಡಿದ್ದಾರೆ. ನಾನು ಹೇಳುವುದು ಇಲ್ಲ ತಂದಿರುವ ಬಿಲ್ಲು ಕೇಂದ್ರ ಸರಕಾರದ ಬಿಲ್ಲು ಎಂದರೆ ಸೆಂಟ್ರಲ್ ಆಕ್ಟ್ 15—1895ರ ಆಧಾರದ ಮೇಲೆ ಇಲ್ಲ ತಂದು ಇದನ್ನು ಮೈಸೂರು ರಾಜ್ಯಕ್ಕೆಲ್ಲಾ ಅನ್ವಯವಾಗುವಂತೆ ವಿಸ್ತರಿಸಲು ತರಲಾಗಿದೆ. ಈ ದೃಷ್ಟಿಯಿಂದ ಇದರಲ್ಲಿ ಹೊಸದಾಗಿ ಯಾವ ಕಾಯುದೆಯೂ ಬರುತ್ತಿಲ್ಲ. ಮುಂದೆ ಸಬ್‌ಸ್ಟ್ಯಾನ್‌ಷಿಯಲ್ಲಾದ ಮನೂದೆ ತಂದಾಗ ಅವೆಲ್ಲ ವಿಚಾರಗಳು ಬರುತ್ತವೆ. ಇದು ಕೇವಲ ಕೇಂದ್ರ ಸರಕಾರದ ಬಿಲ್ಲನ್ನು ಈ ರಾಜ್ಯದಲ್ಲೂ ವಿಸ್ತರಣೆ ಮಾಡುವುದಕ್ಕಾಗಿ ಮಾತ್ರ ಇಲಿ ತಂದಿರುವುದು. ಇದರ ಬಗ್ಗೆ ಮೈಸೂರು ರಾಜ್ಯಕ್ಕೆ ಅನ್ವಯವಾಗುವಾಗ ಇದರಲ್ಲಿ ಮೊದಲಿಂದ ರಿಟ್ರಾಸ್‌ಪೆಕ್ಟೀವ್ ಆಗಿರುವಂತೆ ಮಾಡಬೇಕು ಎಂದೂ ಹೇಳಿದರು ಆದರೆ ಇದರಲ್ಲಿರುವ ಕಲಂ ಮೂರರಲ್ಲಿ ಇದನ್ನು ವಿವರವಾಗಿ ಹೇಳಲಾಗಿದೆ. ಆದರಲ್ಲಿರುವಂತೆ ಕೇಂದ್ರ ಸರಕಾರದ ಆಕ್ಟ್ 15 (1895) ನ್ನು ಮೈಸೂರು ರಾಜ್ಯದಲ್ಲೂ ಪೂರ್ತಿಯಾಗಿ ವಿಸ್ತರಣೆ ಮಾಡುವುದರ ನಲುವಾಗಿ ಮಾತ್ರ ಇಲ್ಲಿ ತಂದಿರುವುದು, ಇದರಲ್ಲಿ ಸದ್ಯದಲ್ಲಿ ರಿಟ್ರಾಸ್‌ಪೆಕ್ಟೀವ್ ಆಗಿ ಯಾವುದೂ ಬರುವಂತಿಲ್ಲ. ಆದುದರಿಂದ ಇಲ್ಲ ತಂದಿರುವ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ಸಭೆಯಲ್ಲಿ ಮಂಡಿಸಿರುವ ಬಿಲ್ಲಿನ ಮೇಲೆ ಅನೇಕ ಮಾನ್ಯ ಸದಸ್ಯರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಈ ವಿಷಯಕ್ಕೆ ಸಂಬಂಧ ಪಡದೇ ಇರತಕ್ಕ ವಿಚಾರಗಳನ್ನೂ ಬಹಳ ಆಕ್ರೋಶದಿಂದ ಹಾಗೂ ಕೆಲವರು ಕೋಪದಿಂದ ಮಾತನಾಡಿ ಬೇರೆ ವಿಷಯಗಳನ್ನೂ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರುವ ವಿಷಯಗಳನ್ನು ಬೇರೆ ಸಂದರ್ಭಗಳಲ್ಲಿ ಹೇಳಲು ಅವಕಾಶವಿದ್ದರೂ ಈ ಬಿಲ್ಲಿನ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಶ್ರೀಮಾನ್ ಕೆಂಚೇಗೌಡರು, ಶ್ರೀ ವೀರಪ್ಪಗೌಡರು ಹಾಗೂ ಇನ್ನೂ ಕೆಲವು ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ಇಲ್ಲಿ ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಮುಖ್ಯವಾಗಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದು ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್ ಆಗಿ ಕೊಡಬೇಕೇ ಬೇಡವೇ ಎನ್ನುವುದು. ಇದು ಕಾನೂನಿನಲ್ಲೇ ಸ್ಪಷ್ಟವಾಗಿದೆ, ಇದರಲ್ಲಿ ಕಲಮು 2ರಲ್ಲೇ ಹೇಳಿರುವಂತೆ ಕೇಂದ್ರ ಸರಕಾರದ ಕಾನೂನನ್ನು ನಮ್ಮ ರಾಜ್ಯದಲ್ಲೂ ವಿಸ್ತರಣೆ ಮಾಡುವುದಕ್ಕೋಸ್ಕರ ಇಲ್ಲ ಈ ಬಿಲ್ಲನ್ನು ತರಲಾಗಿದೆ. ಬೇರೆ ಯಾವ ರೀತಿ

ಯಾದ ತಿದ್ದುಪಡಿಯನ್ನೂ ಇಲ್ಲಿ ತರಲು ಅವಕಾಶವಿಲ್ಲ. ಇದನ್ನು ಹಿಂದಿನ ಅವಧಿಯಿಂದ ತರಬೇಕೇ ಬೇಡವೇ ಎನ್ನುವುದನ್ನು ಇದರಲ್ಲಿ ತಿಳಿಸಬೇಕಾಗಿಲ್ಲ. ಇದನ್ನು ಕೆಲವರು ಜಮೀನನ್ನು ಪರಭಾರೆ ಮಾಡುವುದಕ್ಕೆ ಅಥವಾ ಕೊಂಡುಕೊಳ್ಳುವುದಕ್ಕೆ ಈ ಬಿಲ್ಲಿನಿಂದ ಅನುಕೂಲವಾಗುವುದಿಲ್ಲ ಎನ್ನುವ ವಿಚಾರವನ್ನು ಇಲ್ಲಿ ತಿಳಿಸಿದರು. ಮೂಲತಃ ಈ ಬಿಲ್ಲಿನಲ್ಲಿ ಸರಕಾರ ಕೈಗೊಳ್ಳಬೇಕಾದ ಕ್ರಮ ಏನೂ ಇಲ್ಲ, ಈ ಕಾನೂನಿನ ಮುಖ್ಯ ಉದ್ದೇಶ ಪರಭಾರೆಯನ್ನು ತಪ್ಪಿಸಬೇಕು ಎನ್ನುವುದು ಮಾತ್ರ, ಸರಕಾರದಿಂದ ಜಮೀನುಗಳ ಗ್ರಾಂಟುಗಳನ್ನು ಕೊಡಲಾಗುತ್ತಿದೆ. ಇದನ್ನು ಯಾವಾಗಿನಿಂದ ಕೊಡಬೇಕು ಅಥವಾ ಬೇಡ ಎನ್ನುವುದು ಇದರಲ್ಲಿಲ್ಲ. ಕೇಂದ್ರ ಸರಕಾರದ ಶಾಸನದಂತೆ ನಮ್ಮ ಮೈಸೂರು ರಾಜ್ಯದಲ್ಲೂ ಇಂತಹ ಒಂದು ಶಾಸನ ತರಬೇಕೆಂದು ಇಲ್ಲೂ ತರಲಾಗಿದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಹಿಂದೆ ಸಾವಿರಾರು ಎಕರೆಗಳಷ್ಟು ಭೂಮಿಯನ್ನು ಹಿಂದುಳಿದ ವರ್ಗಗಳವರಿಗೆ ಕೊಟ್ಟರು. ಅದರಲ್ಲಿ ಕೆಲವರು ಹಾಗೆ ಕೊಟ್ಟ ಭೂಮಿಯನ್ನು ಉಳಿಸಿಕೊಳ್ಳಲೂ ಆಗಲಿಲ್ಲ, ಇಂತಹವರಿಂದ ಬೇರೆಯವರು ಕೊಂಡುಕೊಂಡು ಇಂದು ಅವರು ನಿರ್ಗತಿಕರಾಗಿದ್ದಾರೆ ಮತ್ತೆ ಅವರು ಸರಕಾರಕ್ಕೆ ಗ್ರಾಂಟುಗಳಿಗಾಗಿ ಬಂದಾಗ ಅವರು ಹಿಂದೆ ಕೊಟ್ಟಿದ್ದನ್ನು ಉಳಿಸಿಕೊಳ್ಳಲಿಲ್ಲ ಆದ್ದರಿಂದ ಈಗ ಸರಕಾರದವರು ಕೊಡಲಾಗುವುದಿಲ್ಲ ಎಂದು ಹೇಳುತ್ತಾರೆ ಎಂದು ಮಾನ್ಯ ಸದಸ್ಯರೇ ಹೇಳುತ್ತಾರೆ. ಇದು ಹೇಗಿದೆ ಎಂದರೆ ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಎನ್ನುವಂತಾಗಿದೆ. ಇಂತಹವರಿಗೆ ಸರಕಾರ ಅನುಕಂಪ ತೋರಿಸಿ ಮತ್ತೆ ಭೂಮಿ ಕೊಟ್ಟರೆ ಅವರು ಅದನ್ನು ಉಳಿಸಿಕೊಳ್ಳಲು ಆಗುವುದಿಲ್ಲ ಎಂದೂ ಕೆಲವರು ಹೇಳಿದರು. ಆದರೆ ಇದರಲ್ಲಿ ಇರುವ ಮುಖ್ಯ ಉದ್ದೇಶ ರಿಟ್ರಾನ್ಸ್‌ಪೆಕ್ಟೀವ್ ಎಫೆಕ್ಟ್ ಬಗ್ಗೆ ಇದರಲ್ಲಿಲ್ಲ. ಕೇವಲ ಇದರಲ್ಲಿ ಕೇಂದ್ರ ಸರಕಾರದ ಶಾಸನದಂತೆ ಈ ರಾಜ್ಯದಲ್ಲೂ ಇದನ್ನು ವಿಸ್ತರಣೆ ಮಾಡುವುದರ ಬಗ್ಗೆ ಮಾತ್ರ ಇಲ್ಲಿ ಬಿಲ್ಲನ್ನು ತರಲಾಗಿದೆ. ಆದುದರಿಂದ ಮಾನ್ಯ ಸದಸ್ಯರು ಈ ಬಿಲ್ಲಿಗೆ ತಮ್ಮ ಬೆಂಬಲವನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಇಲ್ಲಿ ಲೋಕಾಭಿರಾಮವಾಗಿ ಮಾತನಾಡುವಾಗ ಕೆಲವು ಶಬ್ದಗಳನ್ನು ಹೇಳಿ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ನಿಮ್ಮ ಅಭಿಪ್ರಾಯಗಳು ಯಾವ ರೀತಿಯೇ ಇರಲಿ ನಾವು ಸಭೆಯ ಹೊರಗಡೆ ಎಷ್ಟು ಹಗುರವಾಗಿ ಮಾತನಾಡುತ್ತೇವೆಯೋ ಅಷ್ಟು ಹಗುರವಾಗಿ ಸಭೆಯೊಳಗಡೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹೋಗಬಾರದು ಎಂದು ಕಳಕಳಿಯಿಂದ ಸಭೆಯಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಗಾದೆಯನ್ನು ವೇದಕ್ಕೆ ಸಮಾನ ಎನ್ನುವುದನ್ನು ತಾವು ಒಪ್ಪುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ತಾವೇ ಹೇಳಬಹುದು. ಆದರೆ ಯಾವ ಸಂದರ್ಭದಲ್ಲಿ ಯಾವುದನ್ನು ಹೇಳಬೇಕು ಎನ್ನುವುದು ಅದು ಸದಸ್ಯರಿಗೆ ಸೇರಿದ್ದು. ಇದರ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ, ಒಟ್ಟಿನಲ್ಲಿ ನಾನು ಇಲ್ಲಿ ತಂದಿರುವ ಬಿಲ್ಲಿಗೆ ತಮ್ಮ ಬೆಂಬಲವನ್ನು ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—The question is :

"That the Government Grants (Mysore Extension) Bill, 1972, be taken into consideration."

The motion was adopted.

CLAUSES

Mr. DEPUTY SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

CLAUSES 1 ETC.

Mr. DEPUTY SPEAKER.—The question is :

"That clause 1, the long Title, the Preamble and the enacting formula do stand part of the Bill."

The motion was adopted

Clause 1, the long Tittle, the preamble and the formula were added to the Bill.

Motion to pass

Sri N. HUTCHAMASTHY GOWDA.—Sir, I move :

"That the Government Grants (Mysore Extension) Bill, 1972, be passed."

Mr. DEPUTY SPEAKER.—The question is :

"That the Government Grants (Mysore Extension) Bill, 1972, be passed."

The motion was adopted and the Bill was passed.

USE OF PROVERBS IN SPEECHES

Mr. DEPUTY SPEAKER.—Yesterday certain words were uttered by some Hon'ble Members and I said that I would examine and give a ruling. I have examined all the material and found that ಗಾದೆಮಾತು "ಉಳುವವನಿಗೆ ಭೂಮಿ ಆಳುವವನಿಗೆ ಹೆಣ್ಣು ಕೊಡು" ಎನ್ನುವುದು ಏನಿದೆ ಆದ, to that extent there is no intention to defame anybody and hence there is no reason to expunge the proverb. Even the previous Speakers have upheld these proverbs as valid.

Further some Hon'ble Members stated yesterdey ತಮ್ಮ ನದನ್ಯರು and I in fact stated ತಾವೇ ನಮ್ಮ ನದನ್ಯರು I wish to add that no such imputations should be made against the Presiding Officers. It is the duty of the Presiding Officers to uphold and protect the rights and privileges of every one of the Hon'ble Member of this House. I urge upon all Hon'ble Members to see that they make the speeches in a spirit of understanding and in a sobre manner without making unnecessary allegations against anybody.

Now, I call upon the Hon'ble Minister for Revenue to move the next motion.